**OS.No.**23/2023
ಪಿ**ಡಬ್ಲ್ಯೂ:2**

**ದಿಃ 25-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್ ಎಸ್ 1 ರಿಂದ 12 ಪ್ರತಿವಾದಿಗಳ ಪರ ವಕೀಲರಿಂದ**

ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ಮೃತ ಹನುಮಂತಪ್ಪರವರು ನಮ್ಮ ಕುಟುಂಬದ ಮೂಲ ಪುರುಷ ಎಂದರೆ ಸರಿ. ಸದರಿ ಹನುಮಂತಪ್ಪರವರಿಗೆ ಹಾಲಪ್ಪ ಮತ್ತು ಸಂಕಪ್ಪ ಅಂತ ಇಬ್ಬರು ಮಕ್ಕಳು ಎಂದರೆ ಸರಿ. ಪ್ರಸ್ತುತ ಸದರಿ ಹಾಲಪ್ಪ ಮತ್ತು ಸಂಕಪ್ಪರವರು ಮರಣ ಹೊಂದಿದ್ದಾರ ಎಂದರೆ ಸರಿ. ಮೃತ ಹಾಲಪ್ಪರವರಿಗೆ ಈಶ್ವರಪ್ಪ ಮತ್ತು ಸಿದ್ದರಾಮಪ್ಪ ಅಂತ ಇಬ್ಬರು ಮಕ್ಕಳು ಎಂದರೆ ಸರಿ. ಈಶ್ವರಪ್ಪರವರಿಗೆ ಕುಬೇರಪ್ಪ ಮತ್ತು ಚಂದ್ರಪ್ಪ ಅಂತ ಇಬ್ಬರು ಮಕ್ಕಳು ಎಂದರೆ ಸರಿ. ಕುಬೇರಪ್ಪ ತಂದೇ ಈಶ್ವರಪ್ಪರವರಿಗೆ ಈಶ್ವರಪ್ಪ ಮತ್ತು ಶಂಕರಪ್ಪ ಅಂತ ಇಬ್ಬರು ಮಕ್ಕಳು ಎಂದರೆ ಸರಿ. ಚಂದ್ರಪ್ಪ ತಂದೆ ಈಶ್ವರಪ್ಪರವರಿಗೆ 6 ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ಹಾಲಪ್ಪ ರವರ ಮಗ ಸಿದ್ದರಾಮಪ್ಪ ರವರಿಗೆ ಚಂದ್ರಪ್ಪ ಮತ್ತು ನನ್ನ ತಂದೆ ನಾಗೇಂದ್ರಪ್ಪರವರು ಮಕ್ಕಳು ಎಂದರೆ ಸರಿ. ಚಂದ್ರಪ್ಪ ತಂದೆ ಹಾಲಪ್ಪರವರು ಮರಣ ಹೊಂದಿದ್ದಾರೆ ಎಂದರೆ ಸರಿ. ಸದರಿ ಚಂದ್ರಪ್ಪ ತಂದೆ ಹಾಲಪ್ಪರವರಿಗೆ ಪ್ರತಿವಾದಿ ನಂ 3,7 ಮತ್ತು 8 ರವರು ವಾರಸುದಾರರು ಎಂದರೆ ಸರಿ. ನಾನು ಮತ್ತು 2 ರಿಂದ 6 ನೇ ವಾದಿಗಳು ನನ್ನ ತಂದೇ ನಾಗೇಂದ್ರಪ್ಪರವರ ಮಕ್ಕಳು ಎಂದರೆ ಸರಿ.

ಸಂಕಪ್ಪ ತಂದೆ ಹನುಮಂತಪ್ಪರವರಿಗೆ ಕಲ್ಲಪ್ಪ ಮತ್ತು ಹಾಲಪ್ಪ ಅಂತ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಕಲ್ಲಪ್ಪ ತಂದೆ ಸಂಕಪ್ಪ ರವರಿಗೆ ಪ್ರತಿವಾದಿ ನಂ 10 ರಿಂದ 12 ರವರು ಮಕ್ಕಳು ಎಂದರೆ ಸರಿ. ಹಾಲಪ್ಪ ತಂದೆ ಸಂಕಪ್ಪರವರಿಗೆ ಪ್ರತಿವಾದಿ ನಂ 13 ರಿಂದ 16 ರವರು ಮಕ್ಕಳು ಎಂದರೆ ಸರಿ. ದಿನಾಂಕ 12.09.2002 ರಂದು ಪ್ರತಿವಾದಿ ನಂ 1,2, ಚಂದ್ರಪ್ಪ ತಂದೆ ಸಿದ್ದರಾಮಪ್ಪ, ನನ್ನ ತಂದೆ ನಾಗೇಂದ್ರಪ್ಪ ತಂದೆ ಸಿದ್ದರಾಮಪ್ಪ, ಪ್ರತಿವಾದಿ ನಂ 9, ಹಾಲಪ್ಪ ತಂದೆ ಸಂಕಪ್ಪರವರು ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗ ಪತ್ರದನ್ವಯ ದಾವಾ ಕ್ರಮ ಸಂಖ್ಯೆ 1 ಅನುಸೂಚಿ ಆಸ್ತಿಯಲ್ಲಿ ನನ್ನ ತಂದೆ ನಾಗೇಂದ್ರಪ್ಪ ರವರ ಪಾಲಿಗೆ 32 ಗುಂಟೆ ಆಸ್ತಿ ಮತ್ತು ದಾವಾ ಕ್ರಮ ಸಂಖ್ಯೆ 2 ಅನುಸೂಚಿ ಆಸ್ತಿಯ ಉತ್ತರ ಭಾಗದ 36 ಗುಂಟೆ ಜಮೀನು ಭಾಗದಲ್ಲಿ ಬಂದಿತ್ತು ಎಂದರೆ ಸರಿ. ಸದರಿ ವಿಭಾಗ ಪತ್ರ ಆ ದ ನಂತರ ನನ್ನ

ತಂದೆ ನಾಗೇಂದ್ರಪ್ಪರವರು ಸರ್ವೆ ನಂ 49/ಪಿ1 ರ ಆಸ್ತಿಯಲ್ಲಿ ಭಾಗ ಬೇಕು ಎಂದು ಪ್ರತಿವಾದಿಗಳಿಗೆ ಕೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 12.09.2002 ರ ವಿಭಾಗ ಪತ್ರದನ್ವಯ ಸರ್ವೆ 49/ಪಿ1 ರ ಆಸ್ತಿಯಲ್ಲಿ ಪ್ರತಿವಾದಿ ನಂ 9 ಮತ್ತು ಹಾಲಪ್ಪ ತಂದೆ ಸಂಕಪ್ಪರವರ ಭಾಗಕ್ಕೆ ಹೋಗಿದೆ ಎಂದರೆ ಸರಿ. ನನ್ನ ತಂದೆ ನಾಗೇಂದ್ರಪ್ಪ ರವರು 2014 ರಲ್ಲಿ ಮರಣ ಹೊಂದಿದ್ದಾರೆ. 2002 ರಲ್ಲಿ ನನ್ನ ತಂದೆ ಆರೋಗ್ಯವಂತರಾಗಿದ್ದರು ಎಂದರೆ ಸರಿಯಲ್ಲ. 2002 ರಲ್ಲಿ ನನ್ನ ತಂದೆ ಆರೋಗ್ಯವಂತರಾಗಿರಲಿಲ್ಲ ಎಂಬ ಕುರಿತು ದಾಖಲೆ ಹಾಜರುಪಡಿಸಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. 12.09.2002 ರ ವಿಭಾಗ ಪತ್ರವನ್ನು ನನ್ನ ತಂದೆಯ ಮರಣ ನಂತರ ರದ್ದುಗೊಳಿಸಬೇಕೆಂದು ಮತ್ತು ಮಗದೊಮ್ಮೆ ವಿಭಾಗ ಮಾಡಿಕೊಡಬೇಕು ಎಂದು ಕೇಳಿದ್ದು ಅದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ದಿನಾಂಕ 12.09.2002 ರ ವಿಭಾಗ ಪತ್ರದನ್ವಯ ಆಸ್ತಿಗಳು ಸರಿಯಾಗಿ ಹಂಚಿಕೆ ಆಗಿಲ್ಲ ಎಂದು ಹೇಳಿ ಪ್ರತಿವಾದಿಗಳಿಗೆ ಯಾವುದೇ ನೋಟೀಸ್ ನೀಡಿಲ್ಲ ಎಂದರೆ ಸರಿ. ನನ್ನ ತಂದೆಯ ಜೀವಿತಾವಧಿಯಲ್ಲಿ ನನ್ನ ತಂದೆಯು ದಿನಾಂಕ 12.09.2002 ರ ನೋಂದಾಯಿತ ವಿಭಾಗ ಪತ್ರವನ್ನು ಪ್ರಶ್ನಿಸಿ ಅದನ್ನು ರದ್ದುಗೊಳಿಸಬೇಕು ಎಂದು ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ. ನನ್ನ ತಂದೆ ದಿನಾಂಕ 12.09.2002 ರ ವಿಭಾಗ ಪತ್ರದ ಕುರಿತು ಒಪ್ಪಿಗೆ ಇದ್ದು ಆ ಕಾರಣ ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ಸದರಿ ವಿಭಾಗ ಪತ್ರವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ 12.09.2002 ರ ವಿಭಾಗ ಪತ್ರವನ್ನು ಪ್ರಶ್ನಿಸಿ ನಾನು 2022ರಲ್ಲಿ ಪ್ರಕರಣ ದಾಖಲಿಸಿದ್ದು ಕಾರಣ ನಾವು ದಾಖಲಿಸಿದ ಪ್ರಕರಣ ಕಾಲಮಿತಿಯಿಂದ ಬಾಧಿತವಾಗಿದೆ ಎಂದರೆ ಸರಿಯಲ್ಲ.

ದಿನಾಂಕ 12.09.2002 ವಿಭಾಗ ಪತ್ರದನ್ವಯ ಪ್ರತಿವಾದಿಗಳು ತಮಗೆ ಬಂದ ಆಸ್ತಿಗಳನ್ನು ಸಾಲ ಮಾಡಿ ಅಭಿವೃದ್ದಿಪಡಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ಅಭಿವೃದ್ದಿಪಡಿಸಿರುವುದನ್ನು ನೋಡಿ ಸಹಿಸಲಾರದೇ ಅಸೂಯೆಯಿಂದ ಪ್ರಸ್ತುತ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 12.09.2002 ರ ನೋಂದಾಯಿತ ವಿಭಾಗ ಪತ್ರದನ್ವಯ ಈ ಪ್ರಕರಣದ ದಾವಾ ಕ್ರಮ ಸಂಖ್ಯೆ 1 ಮತ್ತು 2 ರ ಅನುಸೂಚಿ ಆಸ್ತಿಗಳಲ್ಲಿ ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಗಳ ದಾಖಲೆಗಳು ನನ್ನ ತಂದೆಯ ಹೆಸರಿಗೆ ಹಕ್ಕು ಬದಲಾವಣೆ ಆಗಿವೆ ಎಂದರೆ ಸರಿ. ಸದರಿ ವಿಭಾಗ ಪತ್ರದನ್ವಯ ಪ್ರತಿವಾದಿಗಳ ಭಾಗಕ್ಕೆ ಬಂದ ಆಸ್ತಿಗಳ ಕಂದಾಯ ದಾಖಲೆಗಳು

ಪ್ರತಿವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಆಗಿವೆ ಎಂದರೆ ಸರಿ. 12.09.2002 ರ ವಿಭಾಗ ಪತ್ರವನ್ನು ನನ್ನ ತಂದೆ ಒಪ್ಪಿಕೊಂಡಿದ್ದು ಆ ಕಾರಣ ಯಾರಿಗೂ ಅನ್ಯಾಯ ಆಗಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸುವುದಕ್ಕೂ ಮುಂಚೆ ದಿನಾಂಕ 12.09.2002 ರ ವಿಭಾಗ ಪತ್ರವನ್ನು ನಮಗೆ ಗೊತ್ತಿರದೇ ಇದ್ದ ಕಾರಣ ಪ್ರಶ್ನಿಸಿಲ್ಲ. ಪ್ರಕರಣ ದಾಖಲಿಸಲು ದಿನಾಂಕ 10.12.2022 ಮತ್ತು 16.01.2023 ರಂದು ವ್ಯಾಜ್ಯ ಕಾರಣ ಉಂಟಾಗಿದೆ ಎಂದು ಹೇಳಿಕೊಂಡಿದ್ದು ಅದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 12.09.2002 ರ ವಿಭಾಗ ಪತ್ರದನ್ವಯ ಪ್ರತಿವಾದಿಗಳ ಭಾಗಕ್ಕೆ ಬಂದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

12.09.2002 ರ ವಿಭಾಗ ಪತ್ರ ಆದ ನಂತರ ಎಲ್ಲಾ ಒಟ್ಟು ಕುಟುಂಬದ ಸದಸ್ಯರು ಪ್ರತ್ಯೇಕವಾಗಿ ಜೀವಿಸುತ್ತಿದ್ದಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.